



# ಬೃಹತ್ ಕೊಪ್ಪರಿಗೆ

ರಾಜ ಮಹಾರಾಜರ ಕಾಲದಲ್ಲಿ ದವಸಧಾನ್ಯ, ನಿಧಿ, ಧನ, ಖನಿಜಗಳಂತಹ ಹಲವು ಬೆಲೆಬಾಳುವ ಮತ್ತು ದಿನನಿತ್ಯಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಲು ಕಣಜ, ಕೊಪ್ಪರಿಗೆಗಳನ್ನು ನಿರ್ಮಿಸಲಾಗುತ್ತಿತ್ತು. ಕೊಪ್ಪರಿಗೆ ಅಥವಾ ಕಣಜ ಎಷ್ಟಿದೆ ಎನ್ನುವುದರ ಮೇಲೆ ಆ ಪ್ರಾಂತ್ಯದ ಶ್ರೀಮಂತಿಕೆ ನಿರ್ಧಾರವಾಗುತ್ತಿತ್ತು. ಈ ರೀತಿಯ 4 ಕೊಪ್ಪರಿಗೆಗಳನ್ನು ಏಷ್ಯಾ ಖಂಡದಲ್ಲಿ ಎರಡನೇ ಬೃಹತ್ ಹಾಗೂ ಎತ್ತರದ ಏಕಶಿಲಾ ಬೆಟ್ಟ ಎಂದೇ ಪ್ರಸಿದ್ಧವಾಗಿರುವ ತುಮಕೂರಿನ ಸಮೀಪದ ಮಧುಗಿರಿ ಬೆಟ್ಟದ ವೇಣುಗೋಪಾಲ ಸ್ವಾಮಿಯ ಪಾಳುಬಿದ್ದ ದೇಗುಲದ ಪಕ್ಕದಲ್ಲಿ ಕಾಣಬಹುದು. ಇದು ಸಮಾರು 1600 ರಿಂದ 1670ನೇ ಇಸವಿಯಲ್ಲಿ ಆಳಿದ ಪಾಳೆಗಾರರು ತಮ್ಮಲಿನ ಸಂಪತ್ತನ್ನು ಸಂಗ್ರಹಿಸಲು ಬಳಸುತ್ತಿದ್ದರು ಎನ್ನಲಾಗುತ್ತಿದೆ.

—ಮೇಘ ಆರ್. ಸಾನಾಡಿ, ಪುತ್ತೂರು



# ಮನೆಮಕ್ಕಳಲ್ಲಿ ನೇಜಿ ನೆಟ್ಟ ಸಂಭ್ರಮ

ಎಲ್ಲೆಡೆ ಈಗ ಗದ್ದೆ ನೆಟ್ಟಿಯ ಸಂಭ್ರಮ. ಸಾಕಷ್ಟು ಮಳೆಯಾದ ನಂತರ ಗದ್ದೆಯ ಸಣ್ಣ ಭಾಗದಲ್ಲಿ ಬೀಜ ಬಿತ್ತಿ ಸಸಿ ಬೆಳೆಯುತ್ತಾರೆ. 21 ದಿನಗಳ ನಂತರ ಉಳಿದ ಗದ್ದೆಯನ್ನು ಟಿಲ್ಲರ್, ಎತ್ತು ಅಥವಾ ಕೋಣಗಳಿಂದ ಹೂಟೆ ಮಾಡಿ, ಆ ಸಸಿಗಳನ್ನು ಕಿತ್ತು ನೆಟ್ಟಿ ಅಥವಾ ನಾಟಿ ಮಾಡುತ್ತಾರೆ. ಅದಕ್ಕೆ ಕರಾವಳಿಯವರು ನೇಜಿ ನೆಡುವುದು ಅಂತ ಹೇಳುತ್ತಾರೆ. ಹೆಚ್ಚಿನವರು ಪಕ್ಕದ ಗದ್ದೆಗಳಿಗೆ ತಾವು ಕೆಲಸಕ್ಕೆ ಹೋಗಿ ತಮ್ಮ ಗದ್ದೆಗಳಿಗೆ ಆ ಗದ್ದೆಗಳವರು ಕೆಲಸಕ್ಕೆ ಬರುವ ಮೈಯಾಳು ಪದ್ಧತಿ ಮಾಡಿಕೊಳ್ಳುತ್ತಾರೆ. ಮಳೆ ಬಂದಷ್ಟೂ ಖುಷಿಪಡುವ ಈ ಅನ್ನದಾತರು ಖುಷಿಯಿಂದ ಹಾಡಿಕೊಂಡು, ಮಾತಾಡಿಕೊಂಡು ನೆಟ್ಟಿಯನ್ನು ಹಬ್ಬದಂತೆ ಸಂಭ್ರಮಿಸುತ್ತಾರೆ. ನಮ್ಮ ಮಕ್ಕಳು ಈ ಸಲ ಪಕ್ಕದ ಮನೆಯವರ ಗದ್ದೆಗಳಲ್ಲಿ ನೆಟ್ಟಿ ಮಾಡಿ ಖುಷಿ ಪಟ್ಟರು. ಮಕ್ಕಳಲ್ಲಿ ಕೃಷಿ ಬದುಕಿನ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಆಗಬೇಕಿದೆ. ಮಳೆ, ಚಳಿಯಲ್ಲಿ ಕೆಲಸ ಮಾಡುತ್ತಾ ಅನ್ನ ನೀಡುವ ರೈತರ ಬಗ್ಗೆ ಮಕ್ಕಳ ಮನಸಿನಲ್ಲಿ ಗೌರವ ಮೂಡುವಂತೆ ಮಾಡಬೇಕಿದೆ.

—ವಾಣಿ ನಿಗಲೆ

# ಕಲ್ಲಿನ ಡಸ್ಟ್‌ಬಿನ್

ಇವು ಕಾಂಚಿಪುರಂ ಜಿಲ್ಲೆಯ ಐತಿಹಾಸಿಕ ತಾಣ ಮಹಾಬಲಿಪುರಂನ(ಮಾಮಲ್ಲಪುರಂ ಎಂದೂ ಕರೆಯಲಾಗುತ್ತದೆ) 'ತೀರದ ದೇವಸ್ಥಾನ' (Shore Temple ) ಆವರಣದಲ್ಲಿ ನಿರ್ಮಿಸಲಾಗಿರುವ ಕಸದ ತೊಟ್ಟಿಗಳು. ಕಲ್ಲಿನಿಂದಲೇ ಇವುಗಳನ್ನು ನಿರ್ಮಿಸಲಾಗಿದೆ. ದೂರದಿಂದ ನೋಡಿದರೆ ಇವು ಐತಿಹಾಸಿಕ ಸ್ಮಾರಕಗಳಿಗೆ ಸಂಬಂಧಿಸಿದ ರಚನೆಗಳೇ ಇರಬೇಕು ಎಂದು ಭಾಸವಾಗುತ್ತದೆ. ಪಾಸ್ಲಿಕ್ ಬಳಕೆಯನ್ನು ನಿಲ್ಲಿಸಬೇಕು ಎಂಬ ಬಗ್ಗೆ ಜಾಗೃತಿ ಹೆಚ್ಚುತ್ತಿರುವ ಈ ದಿನಗಳಲ್ಲಿ ಕಲ್ಲಿನಿಂದ ವಿನ್ಯಾಸಗೊಳಿಸಿರುವ ಈ ಕಸದ ತೊಟ್ಟಿಗಳು ಖಂಡಿತ ಗಮನ ಸೆಳೆಯುತ್ತವೆ.

—ವೀಣಾ ಬಿ.ಸಿ. ಬೆಂಗಳೂರು

